# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ

## ಹೂವಿನಹಡಗಲಿ

## ಅಸಲು ದಾವೆ ನಂ ಃ 163-2014

**ಪಿಡಬ್ಲ್ಯೂ ಃ 01**

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ ಃ 23-11-2017 ರಂದು ಸತ್ಯ ಪ್ರತಿಜ್ಞೆಯನ್ನು ಬೋದಿಸಲಾಯಿತು.

ಮುಂದುವರೆದ ಪಾಟೀಸವಾಲು ಃ ಪ್ರತಿವಾದಿ ಪರ ಶ್ರೀ ಎಸ್ ಎಸ್ ಬಿ ವಕೀಲರಿಂದ ಃ

1992 ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಬರಗಾಲ ಬಂದಿತ್ತು ಆಗಿನಿಂದಲೂ ನಾನು ಮತ್ತು ನನ್ನ ಸಹೋದರರು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೇವೆ ಅಂದರೆ ಸರಿಯಲ್ಲ. ನಾವೆಲ್ಲರೂ ಕೂಡಿಕೊಂಡೇ ವಾಸ ಮಾಡುತ್ತಿದ್ದೇವೆ. ನನ್ನ ಅಣ್ಣಂದಿರು ಮದುವೆಯಾದನಂತರದಲ್ಲಿ ತಮ್ಮ ಕುಟುಂಬ ಸಮೇತ ಬೇರೆಬೇರಯಾಗಿ ವಾಸವಾಗಿರುತ್ತಾರೆ ಸರಿ. ಅವರವರ ಕುಟುಂಬದ ಖರ್ಚು ವೆಚ್ಚಗಳನ್ನು ಅವರೇ ನಿಭಾಯಿಸುತ್ತಿದ್ದಾರೆ ಅಂದರೆ ಸರಿ. ನಾನು ಮದುವೆಯಾದನಂತರ ನನ್ನ ಕುಟುಂಬ ಸಮೇತ ಮೈಲಾರ ಗ್ರಾಮವನ್ನು ಬಿಟ್ಟು ಹೊಳಲು ಗ್ರಾಮದಲ್ಲಿ ಬಂದು ವಾಸವಾಗಿರುತ್ತೇನೆ ಅಂದರೆ ಸರಿ. (ಸಾಕ್ಷಿಯು ಮುಂದುವರೆದು ಅದು ನನ್ನ ಬೀಗರ ಮನೆಯಾಗಿರುತ್ತದೆ.) ಹೊಳಲು ಗ್ರಾಮಕ್ಕೆ ಬರುವ ಪೂರ್ವದಲ್ಲಿ ಮೈಲಾರ ಗ್ರಾಮದಲ್ಲಿ ಒಂದು ಮನೆ ಇತ್ತು ಅಂದರೆ ಸರಿ. (ಸಾಕ್ಷಿಯು ಮುಂದುವರೆದು ಅದು ನಮ್ಮದಲ್ಲ). ನಾನು ಆ ಮನೆಯನ್ನು ಬಿಟ್ಟು ಬಂದ ಮೇಲೆ ಮೈಲಾರ ಗ್ರಾಮದ ಮನೆಯು ಹಾಳು ಬಂದಿರುತ್ತದೆ ಅಂದರೆ ಸರಿ. ನಾವು ಊಟಕ್ಕೆ ಗತಿ ಇಲ್ಲದೇ ಬೇರೆ ಕಡೆ ಹೋಗಿರುವುದರಿಂದ ಹಾಳು ಬಿದ್ದಿರುತ್ತದೆ.

2. ನಾನು ಈ ದಾವೆಯನ್ನು ಮೂರು ಸರ್ವೆ ನಂಬರಗಳಿಗೆ ಸಂಬಂಧಿಸಿದಂತೆ ಹಾಕಿರುತ್ತೇನೆ. ಈ ಮೂರು ಆಸ್ತಿಗಳನ್ನು ಬಿಟ್ಟು ನಾನು ದಾವಾಆಸ್ತಿಯಲ್ಲಿ ಬೇರೆ ಆಸ್ತಿಯನ್ನು ಸೇರಿಸಿರುವುದಿಲ್ಲ. ಐಟಂ ನಂ ಃ 1 ರ ಆಸ್ತಿಯು ಹೇಗೆ ಬಂದಿರುತ್ತದೆ ಎಂದು ವಾದಪತ್ರದಲ್ಲಿ ಸಲ್ಲಿಸಿರುತ್ತೀರಾ ಅಂದರೆ ಆ ಬಗ್ಗೆ ನನಗೆ ಗೊತ್ತಾಗುವುದಿಲ್ಲ ನನ್ನ ತಂದೆಯ ಆಸ್ತಿ ಎಂದು ಬರೆಸಿರುತ್ತೇನೆ. ಮೈಲಾರ ಲಿಂಗೇಶ್ವರ ದೇವಸ್ಥಾನಕ್ಕೆ ಸಾಕಷ್ಟು ಭೂಮಿ ಇರುತ್ತದೆ ಅಂದರೆ ಸರಿ. ಮೈಲಾರ ಲಿಂಗಪ್ಪನ ದೇವಸ್ಥಾನಕ್ಕೆ ಚಾಕರಿದಾರರು ಬರುತ್ತಾರೆ ಅಂದರೆ ಸರಿ. ಮೈಲಾರ ಲಿಂಗೇಶ್ವರ ದೇವಸ್ಥಾನಕ್ಕೆ ಛತ್ರಿ, ಚಾಮರಿ, ಎಲೆಗತ್ರಿ, ದೀಪಾರಾಧನೆ, ದೋಣಿ ತುಂಬಿಸುವ ಚಾಕರಿದಾರರು ಬರುತ್ತಾರೆ ಅಂದರೆ ಸರಿ. ಈ ಐಟಂ ನಂ ಃ 1 ನ್ನು ನನ್ನ ತಂದೆಯು ಮೈಲಾರ ಲಿಂಗೇಶ್ವರ ದೇವಸ್ಥಾನದಲ್ಲಿ ದೀಪಾರಾಧನೆ ಮಾಡುವ ಸಲುವಾಗಿ ನೀಡಿದ್ದರು ಅಂದರೆ ಸರಿ. ನನ್ನ

ತಂದೆಯು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರ ಶವಸಂಸ್ಕಾರ ಕಾರ್ಯಕ್ರಮದಲ್ಲಿ ನಾನು ಕೂಡ ಭಾಗಿಯಾಗಿದ್ದೇನು. ನನ್ನ ತಂದೆಯ ಜೀವಿತ ಅವಧಿಯ ಕಾಲದಲ್ಲಿ ಮನೆತನದ ಎಲ್ಲಾ ಆಸ್ತಿಗಳನ್ನು ಮತ್ತು ದಾವಾಶೆಡ್ಯೂಲ್ ಆಸ್ತಿಗಳನ್ನು ಪಾಲುವಿಭಾಗವಾಗಿರುತ್ತದೆ ಅಂದರೆ ಪಾಲುವಿಭಾಗವಾಗಿರುವುದಿಲ್ಲ. ಸದ್ರಿ ಪಾಲುವಿಭಾಗದ ಪ್ರಕಾರ ನನ್ನ ಅಣ್ಣ, ತಂಗಿ ಹಾಗೂ ನನ್ನ ಕುಟುಂಬಸ್ತರು ತಮ್ಮ ತಮ್ಮ ಪಾಲಿನ ಆಸ್ತಿಯಲ್ಲಿ ಸಾಗುವಳಿಯನ್ನು ಮಾಡಿಕೊಂಡು ಬಂದಿರುತ್ತಾರೆ ಅಂದರೆ ಸರಿಯಲ್ಲ. ಪಾಲುವಿಭಾಗವಾಗಿರುವುದಿಲ್ಲ. ಸದ್ರಿ ಪಾಲುವಿಭಾಗದ ಪ್ರಕಾರವೇ ನಾನು ಮತ್ತು 1 ರಿಂದ 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಗೆ ಟ್ರ್ಯಾಕ್ಟರನ್ನು ತೆಗೆದುಕೊಳ್ಳಲು ಹೇಳಿರುತ್ತೇವೆ ಅಂದರೆ ಸರಿಯಲ್ಲ. ನಾನು ಮತ್ತು 1 ರಿಂದ 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಗೆ ಟ್ರ್ಯಾಕ್ಟರನ್ನು ಖರೀದಿ ಮಾಡಿದರೆ ಎಲ್ಲರ ಹೊಲದಲ್ಲಿ ಉಳುಮೆ ಮಾಡಲು ಅನುಕೂಲವಾಗುತ್ತದೆ ಎಂದು ಹೇಳಿದ್ದರಿಂದಲೇ 5ನೇ ಪ್ರತಿವಾದಿಯು ಬ್ಯಾಂಕಿನಿಂದ ಸಾಲ ಮಾಡಿ ಟ್ರ್ಯಾಕ್ಟರನ್ನು ಖರೀದಿ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಸದ್ರಿ ಟ್ರ್ಯಾಕ್ಟರ ಖರೀದಿಮಾಡುವುದಕೊಸ್ಕರ 5 ನೇ ಪ್ರತಿವಾದಿಯು ಹರಿಹರ ಎಸ್ ಬಿ ಆಯ್ ಬ್ಯಾಂಕಿನಿಂದ ಸಾಲವನ್ನು ಪಡೆದುಕೊಂಡಿದ್ದು ಸದ್ರಿ ಸಾಲಕ್ಕೆ ನಾವು ಕೂಡ ಎಲ್ಲರೂ ಹಣವನ್ನು ಕೊಡುತ್ತೇವೆ ಎಂದು ಹೇಳಿ ವಾಗ್ದಾನ ಮಾಡಿದ್ದೇವು ಅಂದರೆ ಸರಿಯಲ್ಲ. 5ನೇ ಪ್ರತಿವಾದಿಯ ಹೆಸರಿನಲ್ಲಿ ಮತ್ತು ಆತನ ಸ್ವಾಧೀನದಲ್ಲಿ ಮೈಲಾರ ಗ್ರಾಮದಲ್ಲಿ ಟ್ರ್ಯಾಕ್ಟರ ಇರುತ್ತದೆ ಅಂದರೆ ಸರಿ. ಟ್ರ್ಯಾಕ್ಟರ ಕೂಡ 5ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಮಾಡಲಾಗಿರುತ್ತದೆ ಅಂದರೆ ಸರಿ.

3. ತುಂಗಭದ್ರಾ ನದಿ ಪಾತ್ರದಿಂದ ನಮ್ಮೆಲ್ಲರ ಹೊಲಗಳಿಗೆ 10 ಎಚ್ ಪಿ ಪಂಪ್‌ಸೆಟ್‌ನ ವ್ಯವಸ್ಥೆ ಇರುತ್ತದೆಯೇ ಅಂದರೆ ಇರುತ್ತದೆ. ಆ ಪ್ರಕಾರಕ್ಕೆ ಮೂರು ಕಿಲೋಮೀಟರವರೆಗೆ ನಮ್ಮೆಲ್ಲರ ಹೊಲಗಳಿಗೆ ನೀರಿನ ಪೈಪಲೈನನ್ನು ಹಾಕಲಾಗಿರುತ್ತದೆ ಅಂದರೆ ಸರಿ. 5ನೇ ಪ್ರತಿವಾದಿಗೆ ಐಟಂ ನಂ 1 ರಲ್ಲಿ 7 ಎಕರೆ ಜಮೀನು ಬಂದಿದ್ದರಿಂದ ಅವರು ಬ್ಯಾಂಕಿನಿಂದ ತೆಗೆದ ಸಾಲಕ್ಕೆ ಆ ಆಸ್ತಿಯನ್ನು ಅಡಮಾನಕ್ಕೆ ಇಟ್ಟಿದ್ದರು ಅಂದರೆ ಸರಿಯಲ್ಲ. (ಸಾಕ್ಷಿಯು ಮುಂದುವರೆದು ಎಲ್ಲ ಹೊಲಗಳಲ್ಲಿ ಅಭಿವೃದ್ದಿ ಆದನಂತರ ಎಲ್ಲಾ ಬ್ಯಾಂಕಗಳಲ್ಲೂ ಸಾಲವನ್ನು ತೆಗೆದು ಬಿಲ್ಡಿಂಗ ಮೇಲೆ ಬಿಲ್ಡಿಂಗನ್ನು 5ನೇ ಪ್ರತಿವಾದಿ ಕಟ್ಟಿಸುತ್ತಾ ಇದ್ದಾನೆ.) ಇದರ ಬಗ್ಗೆ ನಾನು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅದೇ ಟ್ರ್ಯಾಕ್ಟರನ ಸಾಲದೊಂದಿಗೆ 5 ನೇ ಪ್ರತಿವಾದಿ ಹೆಚ್ಚುವರಿಯಾಗಿ ಪಂಪಸೆಟ್‌ಗೊಸ್ಕರ ಅದೇ ಬ್ಯಾಂಕಿನಿಂದ ಸಾಲವನ್ನು ತೆಗೆದಿರುತ್ತಾರೆ ಅಂದರೆ ಸಾಲವನ್ನು ತೆಗೆಯುವದು ಮತ್ತು ಹಾಕುವದನ್ನು ಆತನೇ ಮಾಡಿರುತ್ತಾನೆ ಅದರ ಬಗ್ಗೆ

ನನಗೆ ಗೊತ್ತಿರುವುದಿಲ್ಲ. ಟ್ರ್ಯಾಕ್ಟರನ ಸಾಲಕ್ಕೆ ನಾವೆಲ್ಲರೂ ವಾಗ್ದಾನ ಬರೆದುಕೊಟ್ಟರು ಸಹ ಯಾರು ಹಣ ಕೊಡದೇ ಇರುವುದರಿಂದ ಆ ಸಾಲವು ಬ್ಯಾಂಕಿನಲ್ಲಿ ಹಾಗೇ ಬಾಕಿ ಉಳಿಯಿತು ಅಂದರೆ ನಾನು ನನ್ನ ಹೆಂಡತಿ ದುಡಿದು ಹಣವನ್ನು ಕೊಟ್ಟಿರುತ್ತೇವೆ. ಆ ಸಮಯದಲ್ಲಿ ನಾನು ಮತ್ತು 1 ರಿಂದ 4 ನೇ ಪ್ರತಿವಾದಿಗಳು ಹಣವನ್ನು ಕಟ್ಟದೇ 5ನೇ ಪ್ರತಿವಾದಿಗೆ ನಿನಗೆ ತಿಳಿದ ಹಾಗೆ ನೀನು ಮಾಡಿಕೋ ಎಂದು ಹೇಳಿರುತ್ತೇವೆ ಅಂದರೆ ಸರಿಯಲ್ಲ. ಅದೇರೀತಿ 5ನೇ ಪ್ರತಿವಾದಿಗೆ ನೀನು ಟ್ರ್ಯಾಕ್ಟರನಾದರೂ ಮಾರು ಅಥವಾ ನಿನ್ನ ಹಿಸ್ಸೆಗೆ ಇರುವ ಹೊಲವನ್ನು ಮಾರು ಎಂದು ಹೇಳಿರುತ್ತೇವೆ ಅಂದರೆ ಸರಿಯಲ್ಲ. ನಾವೆಲ್ಲರೂ ಸಾಲದ ಹಣವನ್ನು ಕಟ್ಟದೆ ಇರುವುದಕ್ಕೆ ಐಟಂ ನಂ : 1 ರಲ್ಲಿಯ ಒಟ್ಟಾರೆ 7 ಎಕರೆ ಆಸ್ತಿಯಲ್ಲಿ 4 ಎಕರೆ ಜಮೀನನ್ನು 5 ನೇ ಪ್ರತಿವಾದಿಯು ಹೊಳಲು ಗ್ರಾಮದಲ್ಲಿರುವ ಬಡಿಗೇರ ಶಾಂತವ್ವ ಗಂಡ ಬಡಿಗೇರ ಚಂದ್ರಶೇಖರ ಅವರಿಗೆ ಮಾರಾಟ ಮಾಡಿರುತ್ತಾರೆ ಅಂದರೆ ನಮಗೆ ಗೊತ್ತಿಲ್ಲ. ಆ ಮಾರಾಟ ಮಾಡಿ ಬಂದ ಹಣವನ್ನು 5ನೇ ಪ್ರತಿವಾದಿಯು ಬ್ಯಾಂಕಿನಲ್ಲಿ ತೆಗೆದುಕೊಂಡ ಸಾಲವನ್ನು ಅವರು ಮಾತ್ರ ತೀರಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಷಯ ನನಗೆ ಗೊತ್ತಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪಂಪಸೆಟ್‌ನ ಸಲುವಾಗಿ ತೆಗೆದುಕೊಂಡ ಸಾಲ ಇನ್ನು 5ನೇ ಪ್ರತಿವಾದಿಯ ಹೆಸರಿಗೆ ಬಾಕಿ ಇರುತ್ತದೆ ಅಂದರೆ ಸರಿಯಲ್ಲ.

4. ಐಟಂ ನಂ : 4 ನೇ ಆಸ್ತಿಯು ಈಗಲೂ ಸಹ 5ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ ಅಂದರೆ ಸರಿಯಲ್ಲ. ಅದು ಆತನ ಪಾಲಿಗೆ ಬಂದಿದ್ದರಿಂದ ಆತನು ಹೆಚ್ಚಿಗೆ ಹಣವನ್ನು ಖರ್ಚು ಮಾಡಿ ಅದನ್ನು ರಿಪೇರಿ ಮಾಡಿಸಿಕೊಂಡು ಪುನಃ ಕಟ್ಟಿಸಿಕೊಂಡು ವಾಸವಾಗಿರುತ್ತಾನೆ ಅಂದರೆ ಸರಿ. ಅದೇರೀತಿ 1 ಮತ್ತು 2 ನೇ ಪ್ರತಿವಾದಿಗಳಿಗೆ ಸರ್ಕಾರದಿಂದ ಮನೆಯು ಮಂಜೂರಾಗಿದ್ದು ಅದರಂತೆ ಅವರು ಐಟ ನಂ : 5 ರಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ ಅಂದರೆ ಸರಿ. ಆ ಮನೆಗಳನ್ನು 1 ಮತ್ತು 2 ನೇ ಪ್ರತಿವಾದಿಯ ಹೆಂಡತಿಯ ಹೆಸರಿಗೆ ಮಂಜೂರಾಗಿರುತ್ತದೆ ಅಂದರೆ ಸರಿ. ಐಟಂ ನಂ : 6ನೇ ಆಸ್ತಿಯು ಪಾಲುವಿಭಾಗದ ಪ್ರಕಾರ ನನ್ನ ಹಿಸ್ಸೆಗೆ ಬಂದಿದ್ದು ಅದು ಇದುವರೆಗೂ ಹಾಳು ಬಿದ್ದಿರುತ್ತದೆ ಅಂದರೆ ಅದು ನಮ್ಮ ಹಿಸ್ಸೆಗೆ ಬಂದಿರುವುದಿಲ್ಲ ಅದು ನಮ್ಮ ಮನೆ ಇಲ್ಲ ಬೇರೆಯವರ ಮನೆ. ಅದೇರೀತಿ 3 ನೇ ಪ್ರತಿವಾದಿಯು ಐಟಂ ನಂ : 7 ರ ದಾವಾಆಸ್ತಿಯಲ್ಲಿ ಮನೆಯನ್ನು ಕಟ್ಟಿಕೊಂಡು ವಾಸವಾಗಿರುತ್ತಾನೆ ಅಂದರೆ ಸರಿ. ಇದೇ ಪ್ರಕಾರಕ್ಕೆ ಎಲ್ಲಾ ದಾವಾಆಸ್ತಿಗಳು ಪಾಲುವಿಭಾಗದ ಪ್ರಕಾರವೇ ಅವರವರ ಸ್ವಾಧೀನದಲ್ಲಿ ಮತ್ತು ಅನುಭೋಗದಲ್ಲಿ ಇರುತ್ತವೆ ಅಂದರೆ ಸರಿಯಲ್ಲ.

5. ನಾನಾಗಲಿ, ನನ್ನ ಅಣ್ಣಂದಿರಾಗಲಿ 1996 ನೇ ಸಾಲಿನಿಂದ ಈ ದಾವೆ ಹಾಕುವವರೆಗೂ ಪಾಲು ಮಾಡಿಕೊಡಬೇಕೆಂದು ಪ್ರಶ್ನೆಯನ್ನು ಮಾಡಿರುವುದಿಲ್ಲ. ಪಾಲುವಿಭಾಗದ ಪ್ರಕಾರವೇ ಎಲ್ಲರಿಗೂ ಆಸ್ತಿ ಹಂಚಿಕೆಯಾಗಿರುವುದರಿಂದ ನಾನಾಗಲಿ ನನ್ನ ಸಹೋದರರಾಗಲಿ ಪಾಲು ಮಾಡಿಕೊಡಿ ಎಂದು ಪ್ರಶ್ನೆ ಮಾಡಿರುವುದಿಲ್ಲವೆಂದರೆ ಸರಿಯಲ್ಲ. ನಾನು ಹಾಕಿರುವ ಈ ದಾವೆಯು ಕಾಲಪರಿಮಿತಿಯ ಅವಧಿಯನ್ನು ಮುಗಿದಿರುವುದರಿಂದ ನನಗೆ ಈ ದಾವೆಯಲ್ಲಿ ಪರಿಹಾರವನ್ನು ಕೇಳಲು ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯಕೋರಿದ್ದರಿಂದ ಅನುಮತಿ ಮೇರೆಗೆ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೂವಿನಹಡಗಲಿ.